`ನೀನು ಇಲ್ಲಿದ್ದುಕೊಂಡು ಆ ಕೆಲಸ ಹೇಗೆ ಮಾಡುತ್ತೀಯಾ?'

'ನಾನಿರೋದು ತಮ್ಮ ಜೊತೆ.'

'ನನಗೆ ಅರ್ಥವಾಗುತ್ತಿಲ್ಲ.'

ಮನೋಹರ `ನೀವು ಮನಸ್ಸು ಮಾಡಿದರೆ ಶತ್ರುಗಳನ್ನು ಇಲ್ಲಿದ್ದುಕೊಂಡು ಮುಗಿಸಬಹುದು.'

'ಅಂದರೆ... ಅಂದರೆ...?'

ಮನೋಹರ `ನನಗೆ ಬೇರೆ ದಾರಿಯೇ ಇಲ್ಲ ಅವರು ಸಾಯಬೇಕು. ಇಲ್ಲದಿದ್ದರೆ ನಾನು... ನಾನು ಪಾಪರ್ ಆಗುತ್ತೇನೆ.'

ರುದ್ರನಾಗ ಕೋಪದಿಂದ `ನನ್ನ ತಂಗಿಯ ಗಂಡನಿಗೆ ಅಂತಹ ಪರಿಸ್ಥಿತಿ ಬರಲು ಬಿಡುವುದಿಲ್ಲ ಹೇಳು. ನನ್ನಿಂದ ಯಾವ ರೀತಿಯ ಸಹಾಯವನ್ನು ನೀನು ಅಪೇಕ್ಷಿಸುತ್ತಿಯಾ...?'

ಮನೋಹರ... `ನನ್ನ ಶತ್ರುಗಳು ಬೇಗ ಸಾಯಬೇಕು ಅದಕ್ಕೆ ನೀವು...'

ಆತುರದಿಂದ `ನಾನೇನು ಮಾಡಬೇಕು?'

ಮನೋಹರ `ನನ್ನ ಶತ್ರುಗಳ ಮೇಲೆ ಯಾವುದಾದರೂ ಶಕ್ತಿಯನ್ನು ಪ್ರಯೋಗ ಮಾಡಬೇಕು. ಅವರು ಇವತ್ತು ರಾತ್ರಿಯೇ ಸಾಯಬೇಕು.'

ರುದ್ರನಾಗ `ಏನಂದೆ... ಅವರು ಇವತ್ತು ರಾತ್ರಿಯೇ ಸಾಯಬೇಕೇ?'

'ಹೌದು.'

'ಅಸಾಧ್ಯ... ಅದು ಅಸಾಧ್ಯ.'

ಮನೋಹರ `ನೀವು ದೊಡ್ಡ ಮಾಂತ್ರಿಕರು. ತುಂಬಾ ಸಾಧನೆ ಮಾಡಿದ್ದೀರ ಅಂತ ನಾನು ಅಂದುಕೊಂಡಿದ್ದೇನೆ. ನಿಮಗೆ ಯಾವುದೂ ಸಹ ಅಸಾಧ್ಯ ಅಲ್ಲ.'

ರುದ್ರನಾಗ ಹೆಮ್ಮೆಯಿಂದ `ನನ್ನ ಬಗ್ಗೆ ನಿನಗಿರುವ ನಂಬಿಕೆ ಸುಳ್ಳಲ್ಲ. ಒಂದು ರಾತ್ರಿಯಲ್ಲಿ ನಾನು ಶತ್ರುಗಳ ರಕ್ತ ಹೊರ ತೆಗೆಯಬಲ್ಲೆ ಆದರೆ...'

'ಇನ್ನು ಯಾಕೆ ಅನುಮಾನ?'

ರುದ್ರನಾಗ `ಯಾರ ಮೇಲಾದರೂ ಕ್ಷುದ್ರಶಕ್ತಿಯನ್ನು ಪ್ರಯೋಗಿಸಬೇಕಾದರೆ ಅಂತಹವರ ಉಗುರು, ತಲೆಯ ಕೂದಲು ಮತ್ತು ಹೆಜ್ಜೆ ಮಣ್ಣು ಬೇಕು. ಅದಿಲ್ಲದೆ ಪ್ರಯೋಗ ಅಸಾಧ್ಯ.'

'ಅದನ್ನು ತಂದಿದ್ದೇನೆ.'

ವಿಸ್ಮಯದಿಂದ 'ಏನಂದೆ?'

ಮನೋಹರ ತನ್ನ ಜೇಬಿನಿಂದ ಪೇಪರ್ ಪ್ಯಾಕೆಟ್‌ಗಳನ್ನು ಹೊರ ತೆಗೆದ.

ರುದ್ರನಾಗ `ಅಂದರೆ ನನ್ನಿಂದ ಇಂತಹ ಸಹಾಯ ಪಡೆಯಬೇಕು ಅಂತ ನೀನು ಮೊದಲೇ ತೀರ್ಮಾನ ಮಾಡಿಕೊಂಡಿದ್ದೀಯಾ?'

ಮನೋಹರ ತಲೆಯಾಡಿಸಿದ.

ರುದ್ರನಾಗ ತಂಗಿಯ ಗಂಡನ ಕೈ ಅದುಮುತ್ತಾ 'ಇನ್ನು ನೀನು ನಿಶ್ಚಿಂತೆಯಿಂದ ನಿದ್ದೆ ಮಾಡು. ನಾಳೆ ಬೆಳಿಗ್ಗೆ ಬೆಂಗಳೂರಿಗೆ ಫೋನ್ ಮಾಡು. ನಿನಗೆ ಶತ್ರುಗಳ ಸಾವಿನ ಸುದ್ದಿ ತಿಳಿಯುತ್ತದೆ.'

ಮನೋಹರ ಬೆಚ್ಚಿಬಿದ್ದ. ಯಾಕೆ ಅಂತ ಗೊತ್ತಿಲ್ಲ. ಅವನು ಗಾಬರಿಯಾಗಿದ್ದಾನೆ.

ಅದ್ಯಾಕೋ ಚಡಪಡಿಸುತ್ತಿದ್ದಾನೆ. ಇಬ್ಬರೂ ಮನೆಯ ಕಡೆ ಹೆಜ್ಜೆ ಹಾಕುತ್ತಿದ್ದಾರೆ. ಮನೋಹರ ಮೆಲ್ಲಗೆ 'ಇನ್ನೊಂದು ಸಂಗತಿ.'

'ಹೇಳು ಮನೋಹರ'

'ಇದು ನನ್ನ ಹೆಂಡತಿಗೆ ಗೊತ್ತಾಗಬಾರದು. ಅರುಂಧತಿ ಗಾಬರಿಯಾಗುತ್ತಾಳೆ.'

ರುದ್ರನಾಗ `ನನ್ನ ವೃತ್ತಿಯ ಬಗ್ಗೆ ಹೆಂಗಸರ ಹತ್ತಿರ ಮಾತಾಡಿ ನನಗೆ ಅಭ್ಯಾಸ ಇಲ್ಲ.'

ಮನೋಹರನಿಗೆ ಭಯ, ಸಂದೇಹ ಕಾಡುತ್ತಿದೆ. ನಿಜವಾಗಿಯೂ ಮಾಂತ್ರಿಕ ಶಕ್ತಿ ಇರುವುದೆ? ಒಂದು ವೇಳೆ ಮಾಂತ್ರಿಕ ಶಕ್ತಿ ಇರುವುದು ನಿಜವೇ ಆಗಿದ್ದರೆ ಪರಿಣಾಮ ಭಯಂಕರವಾಗುತ್ತದೆ. ಮನೋಹರ ಸುಳ್ಳು ಹೇಳಿದ್ದ. ಮಾಂತ್ರಿಕ ಶಕ್ತಿಯನ್ನು ಪರೀಕ್ಷಿಸಲು ಅವನು ಸುಳ್ಳಿನ ಕತೆ ಹೇಳಿದ್ದ. ಅವನಿಗೆ ಬಿಜಿನೆಸ್‌ನಲ್ಲಿ ಶತ್ರುಗಳಿರಲಿಲ್ಲ.

ಅವನು ಸಂಗ್ರಹಿಸಿದ್ದ ಉಗುರು, ತಲೆಯ ಕೂದಲು ಮತ್ತೆ ಹೆಜ್ಜೆ ಮಣ್ಣು ಶತ್ರುಗಳದ್ದಲ್ಲ! ಮಾನವೀಯತೆ ಇರುವ ಮನುಷ್ಯರು ಇಂತಹ ಕ್ರೂರ ಕೆಲಸ ಮಾಡುವುದಿಲ್ಲ. ಆದರೆ ಮನೋಹರ ಮಾಡಿಬಿಟ್ಟಿದ್ದ. ಅದರ ಪರಿಣಾಮ ಬಿರುಗಾಳಿಯಂತೆ ಎಲ್ಲರ ಮೇಲೂ ನುಗ್ಗುವುದರಲ್ಲಿತ್ತು.

ರಾತ್ರಿ ಒಂಭತ್ತರ ಸಮಯ. ಬೃಹದಾಕಾರದ ಮರಗಳಿಂದ ಆವೃತವಾಗಿರುವ ಕಾಡಿನ ರಸ್ತೆ ಅದು. ಕಗ್ಗತ್ತಲು ಆವರಿದೆ. ಮರಗಳು ಭಯಂಕರ ವಿಕೃತರೂಪ ತಳೆದು ನಿಂತಿರುವಂತೆ ಕಾಣುತ್ತಿದೆ ಕತ್ತಲಿನಲ್ಲಿ. ಸೊಯ್ಯನೆ ಗಾಳಿ ಬೀಸುತ್ತಿದೆ. ಬಗಲಲ್ಲಿ ಬ್ಯಾಗು ನೇತಾಡುತ್ತಿದೆ. ಅದರಲ್ಲಿ ವಿವಿಧ ರೀತಿಯ ಪೂಜಾ ಸಾಮಗ್ರಿಗಳಿವೆ. ಬಲಗೈಯಲ್ಲಿ ಉರಿಯುತ್ತಿರುವ ಲ್ಯಾಟೀನ್ ಮತ್ತೊಂದು ಕೈಯಲ್ಲಿ ಉದ್ದನೆಯ ಕೋಲು ಇವೆ. ಅದು ಮಂತ್ರ ದಂಡ! ಅದರ ತುದಿಯಲ್ಲಿ ಗುರು ಮಾಂತ್ರಿಕನ ತಲೆಬುರುಡೆಯನ್ನು ಸೇರಿಸಲಾಗಿದೆ. ಈ ಮಂತ್ರದಂಡ ರುದ್ರನಾಗನ ಕೈಯಲ್ಲಿ ಇರುತ್ತದೆ. ರಾತ್ರಿಯ ಹೊತ್ತು ಒಬ್ಬನೇ ತಿರುಗುವಂತಹ ಪ್ರಸಂಗ ಬಂದರೆ ಉಪಯೋಗಿಸುತ್ತಾನೆ.

ಆತ್ಮರಕ್ಷಣೆಗೆ ಇದು ಅಗತ್ಯ. ಯಾಕೆ ಅಂದರೆ ಪ್ರಬಲ ಮಾಂತ್ರಿಕನನ್ನು ಯಾವ ರೀತಿಯಲ್ಲಿಯಾದರೂ ಮುಗಿಸಲು ಪ್ರೇತಪಿಶಾಚಿ ಮತ್ತು ಕ್ಷುದ್ರಶಕ್ತಿಗಳು ಕಾಯುತ್ತಿರುತ್ತವೆ.

ಮಾಂತ್ರಿಕ ಪ್ರಬಲನಾದರೆ ಪ್ರೇತಪಿಶಾಚಿಗಳು ಅವನ ನಿಯಂತ್ರಣದಲ್ಲಿರುತ್ತವೆ. ಅದಕ್ಕೆ ಮಾಂತ್ರಿಕನನ್ನು ಕಂಡರೆ ದುಷ್ಟಶಕ್ತಿಗಳು ಸದಾ ದ್ವೇಷಿಸುತ್ತವೆ. ಮಾಂತ್ರಿಕನಿಂದಾಗಿ ಅವುಗಳಿಗೆ ಸ್ವಾತಂತ್ರ್ಯ ಇರುವುದಿಲ್ಲ.

ಮಾಂತ್ರಿಕ ಗಕ್ಕನೆ ನಿಂತ. ಯಾರೋ ಬರುತ್ತಿರುವಂತೆ ಹತ್ತಿರದಲ್ಲಿಯೇ ಹೆಜ್ಜೆಗಳ ಧ್ವನಿ ಕೇಳಿಬರುತ್ತಿದೆ. ಗಡಸು ಧ್ವನಿಯಲ್ಲಿ `ಯಾರದು?'

ಗಾಳಿ ಧುತ್ತನೆ ನುಗ್ಗಿತು. ತರಗೆಲೆಗಳ ಮೇಲೆ ಹೆಜ್ಜೆಗಳನ್ನು ಊರಿದಾಗ ಕೇಳಿ ಬರುವ ಶಬ್ದ...

ಚರಕ್... ಚರಕ್...

ಕೈಯಲ್ಲಿ ಹಿಡಿದಿರುವ ಲ್ಯಾಟೀನನ್ನು ತುಸು ಮೇಲೆ ಎತ್ತಿ ಹಿಡಿದು ಶಬ್ದ ಬಂದತ್ತ ತಿರುಗಿದ. ಮರಗಳು... ಕತ್ತಲಿನ ವಿನಃ ಯಾರೂ ಕಂಡುಬರುತ್ತಿಲ್ಲ. ನಡಿಗೆಯನ್ನು ಮುಂದುವರೆಸಿದ ರುದ್ರನಾಗ. ಮಂತ್ರದಂಡ ಮೇಲೆತ್ತಿದ. ತಲೆಬುರುಡೆ ಇರುವ ಮಂತ್ರದಂಡ ವಿಚಿತ್ರ ಕಾಂತಿಯಿಂದ ಹೊಳೆಯುತ್ತಿದೆ. ರುದ್ರನಾಗನಿಗೆ ಗೊತ್ತಿದೆ. ಪ್ರೇತ ಪಿಶಾಚಿಗಳಿಗೆ ತನ್ನ ಹತ್ತಿರ ಬರುವ ಧೈರ್ಯ ಇಲ್ಲ ಎಂದು.

ದೂರದಲ್ಲಿ ಕಂಡು ಬರುತ್ತಿದೆ ಒಂಟಿಯಾಗಿರುವ ನಾಡಹೆಂಚಿನ ಮನೆ. ಅಲ್ಲಿ ದೀಪ ಉರಿಯುತ್ತಿದೆ! ರುದ್ರನಾಗ ಬಾಗಿಲನ್ನು ಬಡಿದ.

'ಯಾರು... ಯಾರದು' ಎಂದು ಕೂಗುತ್ತಾ ಬಾಗಿಲನ್ನು ತೆರೆದ ಮದಂತ.

ಗುರು ಮಾಂತ್ರಿಕ ರುದ್ರನಾಗನನ್ನು ಅಂಥ ಸಮಯದಲ್ಲಿ ಕಂಡು ಆಶ್ಚರ್ಯವಾಯಿತು.

'ಈಗಲೇ ನನ್ನ ಜೊತೆ ಬಾ'

ಎಲ್ಲಿಗೆ... ಯಾಕೆ ಅಂತ ಕೇಳುವ ಧೈರ್ಯ ಇಲ್ಲ. ಸ್ಮಶಾನಕ್ಕೆ ಕರೆಯುತ್ತಿದ್ದಾನೆ ಅಂತ ಗೊತ್ತಿದೆ. ಅಂದರೆ ಯಾರಿಗೋ ಯಮಲೋಕಕ್ಕೆ ಹೋಗಲು ಚೀಟಿ ಬಂದಿದೆ. ರುದ್ರನಾಗ `ಮದಂತ ಇವತ್ತು ರಾತ್ರಿಯೇ ಚಂಡ, ಕಾಪಾಲರನ್ನು ಕರೆಯಬೇಕು...'

ತತ್ತರಿಸಿ ಹೋದ ಮದಂತ.

ಚಂಡಕಾಪಾಲ!

ಪಂಚಮ ಕ್ಷುದ್ರಶಕ್ತಿಗಳಲ್ಲಿ ಎರಡು ಮತ್ತು ನಾಲ್ಕನೆಯ ಕ್ರಮದಲ್ಲಿ ಬರುತ್ತವೆ.

ಗುರು... ಚಂಡ... ಕಾಲ... ಕಾಪಾಲ ಮತ್ತು ರಕ್ತೋದರ ಎಂಬ ಐದು ಶಕ್ತಿಗಳು.

ಮದಂತ ಗಾಬರಿಯಿಂದ `ಗುರುಗಳೇ... ಚಂಡ... ಕಾಪಾಲರನ್ನು ಕರೆಸುವ ಅಗತ್ಯ ಏನು?'

`ವಿವರಣೆ ನಿನಗೆ ಅನಗತ್ಯ.'

ಮದಂತ `ನನಗೆ ಕಾರಣ ಹೇಳಬೇಡಿ. ಆದರೆ ಈ ಪ್ರಯೋಗ ಮಾಡಲು ಪೂಜಾ ಸಾಮಾಗ್ರಿಗಳನ್ನು ಹೊಂದಿಸಿಕೊಂಡಿಲ್ಲ.'

`ನಾನು ಎಲ್ಲವನ್ನೂ ತಂದಿದ್ದೇನೆ. ನೀನು ಬೇಗ ಹೊರಡು ಮದಂತ.'

ಮದಂತ ಮಾತಾಡಲಿಲ್ಲ.

ರುದ್ರನಾಗ `ಮದಂತ... ಇದನ್ನು... ಈ ಪ್ರಯೋಗವನ್ನು ನಿನ್ನ ಕೈಯಿಂದ ಯಾಕೆ ಮಾಡಿಸುತ್ತಿದ್ದೇನೆ ಅಂತ ಗೊತ್ತೆ. ನನ್ನ ಶಿಷ್ಯನಿಗೆ ಕಲಿತಿರುವ ವಿದ್ಯೆ ಚೆನ್ನಾಗಿ ಮನಸ್ಸಿನಲ್ಲಿ ಉಳಿಯಲಿ ಅಂತ. ಕಲಿತಿರುವುದನ್ನು ಪ್ರಯೋಗಿಸಿದರೆ ಮಾತ್ರ ಅದರಲ್ಲಿ ಪರಿಪೂರ್ಣತೆಯನ್ನು ಸಾಧಿಸಿದಂತೆ ಆಗುತ್ತದೆ ಮದಂತ.'

ಮದಂತ ತಲೆಯಾಡಿಸಿದ. ಹತ್ತು ನಿಮಿಷಗಳ ನಂತರ ಗುರುಶಿಷ್ಯರು ಸ್ಮಶಾನದ ಕಡೆ ಬಿರಬಿರನೆ ನಡೆಯಲಾರಂಭಿಸಿದರು.

ನಿಶ್ಯಬ್ಧತೆ ನೆಲೆಸಿದೆ.

ಕಾಪಾಲ... ಚಂಡ ಎಂಬ ಮಹಾನ್ ಕ್ಷುದ್ರಶಕ್ತಿಗಳು ಇನ್ನೇನು ಕೆಲವೇ ಗಂಟೆಗಳಲ್ಲಿ ಕಾಣಿಸಿಕೊಳ್ಳಲಿವೆ. ರುದ್ರನಾಗ ತಂಗಿಯ ಗಂಡನಿಗೆ ಸಹಾಯ ಮಾಡುವ ಸಡಗರದಲ್ಲಿ ಅವನನ್ನು ಮರೆತಿದ್ದ.

ಅವನು ಹಸಿರು ಗಿಡಗಳ ರಾಮಯ್ಯ!

* * *

(ಸಶೇಷ)